

ಏರುತ್ತಲೇ ಇರುವ ಅದಿತಿ ಕೈ ಹಿಡಿಯಲಿರುವ ಹುಡುಗನ ಹೆಸರೂ ಯಶಸ್. ಅಂದಮೇಲೆ ವೃತ್ತಿಬದುಕಿನಲ್ಲಿ, ಖಾಸಗೀ ಬದುಕಿನಲ್ಲಿಯೂ ಅವರು ಯಶಸ್ಸಿನ ಕೈಯನ್ನೇ ಹಿಡಿಯುತ್ತಿದ್ದಾರೆ ಎನ್ನಬಹುದು.

ಚಿತ್ರರಂಗದಲ್ಲಿ ಎತ್ತರಕ್ಕೆ ಏರುತ್ತಿರುವ ಕಾಲದಲ್ಲಿ ಮದುವೆ ಸುದ್ದಿ ಹೊರಹಾಕಿದ್ದು ವೃತ್ತಿಬದುಕಿಗೆ ಒಳ್ಳೆಯ ಪರಿಣಾಮ ಕೊಡುವುದಿಲ್ಲ ಎಂದು ಗಾಂಧಿನಗರದ ಹಳೆಯ ಮಂದಿ ಲೊಚಗುಟ್ಟಿಕೊಂಡರೂ ಅದಿತಿ ಈ ಬಗ್ಗೆ ತಲೆಕೆಡಿಸಿಕೊಂಡ ಹಾಗಿಲ್ಲ. ತಮ್ಮ ಬಿಡುವಿಲ್ಲದ ಚಿತ್ರೀಕರಣದ ಮಧ್ಯವೇ ಅವರು ಹಾಸನಕ್ಕೆ ತೆರಳಿ ನಿಶ್ಚಿತಾರ್ಥ ಮುಗಿಸಿಕೊಂಡು ಹಾಗೆಯೇ ಸಿನಿಮಾ ಸೆಟ್‌ಗೆ ಮರಳಿದ್ದಾರೆ!

ಇಷ್ಟು ಗಡಿಬಿಡಿಯಲ್ಲಿ ನಿಶ್ಚಿತಾರ್ಥವೇನೋ ನಡೆದುಹೋಯಿತು. ಆದರೆ ಹೊಸವರ್ಷದ ಹೊಸ್ತಿಲಲ್ಲಿ ಬಿಡುವು ಮಾಡಿಕೊಂಡು ಅವರು ತಮ್ಮ ಜೀವನ ಸಂಗಾತಿ ಆಗಲಿರುವ ಯಶಸ್ ಅವರ ಊರಾದ ಕೊಡಗಿಗೆ ಹೋಗಿ ನಡುರಾತ್ರಿ ಅಗ್ಗಷ್ಟಿಕೆ ಹಾಕಿಕೊಂಡು ಚಳಿ ಕಾಯಿಸುತ್ತಿರುವ ಫೋಟೊವನ್ನು ಇನ್‌ಸ್ಟಾದಲ್ಲಿ ಹಂಚಿಕೊಂಡಿದ್ದಾರೆ. ಅವರನ್ನು ಆರಾಧ್ಯ ದೈವವಾಗಿ ನೋಡುತ್ತಿದ್ದ ಹುಡುಗರ ಎದೆಯೂ ಹಾಗೆಯೇ ಉರಿಯುತ್ತಿತ್ತೋ ಏನೋ.

ಅದಿತಿ ಮತ್ತು ಯಶಸ್ ಕುಟುಂಬಗಳೆರಡೂ ಸೇರಿ ಈ ಸಂಬಂಧವನ್ನು ಕೂಡಿಸಿದ್ದಂತೆ. ಕಾಫಿ ಎಸ್ಟೇಟ್ ಒಡೆಯನಾಗಿರುವ ಯಶಸ್ ಅವರೇ ಮೊದಲು ಅದಿತಿಯನ್ನು ನೋಡಿ ಇಷ್ಟಪಟ್ಟಿದ್ದಂತೆ. ಇವರಿಬ್ಬರು ಯಾವಾಗ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ ಎಂಬುದಿನ್ನೂ ನಿಶ್ಚಯವಾಗಿಲ್ಲ, ಅಥವಾ ನಿಶ್ಚಯವಾಗಿದ್ದರೂ ಹೊರಜಗತ್ತಿಗೆ ಜಾಹೀರಾಗಿಲ್ಲ.

ಸದ್ಯಕ್ಕಂತೂ ಅದಿತಿ ಸಾಕಷ್ಟು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಉಳಿದುಕೊಂಡಿರುವ ಸಿನಿಮಾಗಳು, ಈಗ ಎದುರಿಗೆ ನಿಂತಿರುವ ಓಮೈಕ್ರಾನ್ ಭೂತದ ಆತಂಕದ ನಡುವೆಯೇ ಅವರು ಹಲವು ಸಿನಿಮಾಗಳ ಚಿತ್ರೀಕರಣ ಮುಗಿಸಬೇಕಾದ ಧಾವಂತದಲ್ಲಿದ್ದಾರೆ. ಹಾಗಾಗಿ ಸದ್ಯಕ್ಕಂತೂ ಅವರು ಮದುವೆಯ ಬಗ್ಗೆ ತಲೆಕೆಡಿಸಿಕೊಳ್ಳುವ ಸಾಧ್ಯತೆ ಕಡಿಮೆ.

ಇವೇನೇ ಇದ್ದರೂ ಅದಿತಿ ವೃತ್ತಿಬದುಕಿನಲ್ಲಿ ಹಲವು ಮೆಟ್ಟಿಲುಗಳನ್ನು ಹತ್ತುತ್ತಲೇ ವೈಯಕ್ತಿಕ ಬದುಕಿನಲ್ಲಿಯೂ ಮತ್ತೊಂದು ಮಗ್ಗುಲಿಗೆ ಹೊರಳಿಕೊಂಡಿದ್ದಾರೆ. ಅವರಿಗೆ ಶುಭಾಶಯ ಕೋರೋಣ. ■

# ಮತ್ತೆ ಲಾಕ್‌ಡೌನ್ ಗುಮ್ಮ!



ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಕಾರಣಕ್ಕೆ ಮಾಡಲಾದ ಲಾಕ್‌ಡೌನ್‌ನಿಂದ ಚಂದನವನಕ್ಕಾದ ನಷ್ಟ ಅಷ್ಟಿಷ್ಟಲ್ಲ. ಈ ನಷ್ಟ ಬರೀ ಹಣದ ರೂಪದ್ದಲ್ಲ, ಸಾವಿರಾರು ಜನರ ಬದುಕಿನ ರೂಪದ್ದೂ ಹೌದು. ಈಗ ಮತ್ತೆ ಸರ್ಕಾರ ಕೊರೊನಾ ತಡೆಗಟ್ಟಲು ಕಠಿಣ ನಿರ್ಬಂಧಗಳನ್ನು ರೂಪಿಸಿದೆ. ಚಿತ್ರಮಂದಿರಗಳಲ್ಲಿ ಶೇ. 50ರಷ್ಟು ಮಾತ್ರವೇ ಪ್ರೇಕ್ಷಕರ ಭರ್ತಿಗೆ ಅವಕಾಶ ನೀಡಿದೆ. ಈ ನಿಯಮಗಳು ಬಿರುಮಳೆಗೆ ಮುನ್ನಿನ ಸುಳಿಗಾಳಿಯಂತೆ ಹಲವರಿಗೆ ಕಾಣಿಸುತ್ತಿದೆ. ಅಂದರೆ ಕೆಲವೇ ದಿನಗಳಲ್ಲಿ ಲಾಕ್‌ಡೌನ್ ಕೂಡ ಘೋಷಣೆಯಾಗುತ್ತದೆ ಎಂಬುದು ಅವರ ಅನುಮಾನ.

ಈಗಾಗಲೇ ದೊಡ್ಡ ದೊಡ್ಡ ಸಿನಿಮಾಗಳೆಲ್ಲ ಬಿಡುಗಡೆಯ ದಿನಾಂಕವನ್ನು ಮುಂದೂಡಿವೆ. ರಕ್ಷಿತ್ ಶೆಟ್ಟಿ ಅಭಿನಯದ 'ಚಾರ್ಲಿ 777' ಕಳೆದ ತಿಂಗಳಿನಿಂದಲೂ ಬಿಡುಗಡೆ ದಿನಾಂಕ ಘೋಷಿಸುವುದು, ಮುಂದೂಡುವ ಆಟವಾಡುತ್ತಲೇ ಇದೆ. ಈಗಂತೂ ಬಿಡುಗಡೆಯ ಮಾತು ಮತ್ತಷ್ಟು ದೂರಕ್ಕೇ ಹೋಗಿದೆ. ಪ್ರೇಮ್ ನಿರ್ದೇಶನದ 'ಏಕ್‌ಲವ್‌ಯಾ' ಕೂಡ ಜನವರಿಯಲ್ಲಿ ಬಿಡುಗಡೆಯಾಗಬೇಕಾಗಿತ್ತು. ಆದರೆ ಅದೂ ಮುಂದಕ್ಕೆ ಹೋಗಿದೆ. 'ಆರ್‌ಆರ್‌ಆರ್' ಸಿನಿಮಾ ಜೊತೆಗೇ ಚಿತ್ರಮಂದಿರಕ್ಕೆ ಬರಲು ರೆಡಿಯಾಗಿದ್ದ ಪ್ರಕಾಶ್‌ರಾಜ್ ಮೆಹು ನಿರ್ದೇಶನದ 'ಡಿಎನ್‌ಎ' ಸಿನಿಮಾ ಕೂಡ 'ಆರ್‌ಆರ್‌ಆರ್' ಸಿನಿಮಾದ ಜೊತೆಗೇ ಬಿಡುಗಡೆಯ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಂಡಿದೆ. ದಯಾಳ್ ಪದ್ಮನಾಭನ್ ನಿರ್ದೇಶನದ '9ನೇ ದಿಕ್ಕು' ಕಳೆದ ನವೆಂಬರ್ ತಿಂಗಳಿನಿಂದಲೂ ಮುಂದಕ್ಕೆ ಹೋಗುತ್ತಲೇ ಈಗಲೂ ದಿಕ್ಕು ತೋಚದೆ ನಿಂತಿದೆ.

ಚಿತ್ರಗಳ ಬಿಡುಗಡೆಯ ಪ್ರಶ್ನೆ ಒಂದೆಡೆಯಾದರೆ, ಚಿತ್ರರಂಗವನ್ನೇ ನಂಬಿಕೊಂಡಿದ್ದ ಕಾರ್ಮಿಕರು, ನಿರ್ಮಾಪಕರು, ನಟರು, ತಂತ್ರಜ್ಞರದ್ದು ಬೇರೆಯದೇ ಪಾಡು. ಕಳೆದ ಎರಡು ವರ್ಷಗಳಲ್ಲಿ ನುಜ್ಜುಗುಜ್ಜಾಗಿದ್ದ ಬದುಕನ್ನು ಮತ್ತೆ ಎತ್ತಿನಿಲ್ಲಿಸುವ ಹಂಬಲದಲ್ಲಿದ್ದ ಅವರಿಗೆ ಈಗಿನ ನಿರ್ಬಂಧಗಳು ಗಾಯದ ಮೇಲೆ ಖಾರ ಸವರುವುದು ಖಚಿತ. ಮೊದಲೇ ಅನಿಶ್ಚಿತತೆಯಲ್ಲಿ ತೊಳಲಾಡುತ್ತಿದ್ದ ಚಿತ್ರರಂಗ ಇನ್ನಷ್ಟು ಕುಸಿಯುವುದರಲ್ಲಿ ಅನುಮಾನವಿಲ್ಲ. ಈ ಕುಸಿತದ ಆಳ ಎಷ್ಟಿರುತ್ತದೆಯೋ, ಅದರಿಂದ ಮತ್ತೆ ಮೇಲೆ ಬರುವುದು ಎಷ್ಟು ಕಷ್ಟವೋ ಎಂಬುದಕ್ಕೆಲ್ಲ ಕಾಲವೇ ಉತ್ತರಿಸಬೇಕು. ■

